**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ 485/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | | ವನರಾಜು | ಪ್ರಮಾಣ ಮಾಡಿದ ದಿನಾಂಕಃ 22.06.2026 |
| ತಂದೆ ಹೆಸರು | | ಚನ್ನವೀರೇಗೌಡ | |
| ವಯಸ್ಸು | | 51 ವರ್ಷ | |
| ವೃತ್ತಿ | | ಸಿಪಿಐ | ಚಾಸಾ: 18 |
| ವಾಸಸ್ಥಳ | | ಸಕಲೇಶಪುರ ಟೌನ್ | ಫ್ರಾಸಾ: 06 |

**ದಿನಾಂಕಃ** 22.06.2026 **ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ**

ದಿಃ 03.08.2023 ರಿಂದ 16.10.2025 ರವರೆಗೆ ಬೇಗೂರು ಪೊಲೀಸ್ ಠಾಣೆಯಲ್ಲಿ ಸಿಪಿಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 03.11.2024 ರಂದು ಚಾಸಾ-17 ರವರಿಂದ ಕಡತ ಪಡೆದುಕೊಂಡು ತನಿಖೆ ಮುಂದುವರೆಸಿರುತ್ತೇನೆ. ಚಾಸಾ-6, 7 ಮತ್ತು 8 ರವರನ್ನು ಪಂಚರನ್ನಾಗಿ ಮಾಡಿಕೊಂಡು ಮೃತನ ಶನಿತನಿಖೆಯನ್ನು ಬೇಗೂರು ಆಸ್ಪತ್ರೆಯ ಶವಗಾರದಲ್ಲಿ ಬೆಳಿಗ್ಗೆ 8.15 ರಿಂದ 10.15 ರವರೆಗೆ ನಡೆಸಿರುತ್ತೇನೆ. ನಂತರ ಚಾಸಾ-1, 4 ಮತ್ತು 5 ರವರನ್ನು ಪಂಚರನ್ನಾಗಿ ಮಾಡಿಕೊಂಡು ಕೆಎಲ್ 56-ಹೆಚ್-3255 ಮಾರುತಿ ಸ್ವಿಫ್ಟ್ ಕಾರ್ ನ ಅಮಾನತ್ತು ಮಹಜರ್ ನ್ನು ಮದ್ಯಾಹ್ನ 12.00 ರಿಂದ 12.30 ರವರೆಗೆ ಮಾಡಿರುತ್ತೇನೆ. ಅದನ್ನು ಠಾಣಾ ಪಿಎಫ್ 190/ಎ2024 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-4 ಮತ್ತು 5 ರವರನ್ನು ಪಂಚರನ್ನಾಗಿ ಮಾಡಿಕೊಂಡು ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಸ್ಥಳ ಮಹಜರ್ ನ್ನು ಸಂಜೆ 4.00 ರಿಂದ 4.45 ರವರೆಗೆ ಮಾಡಿ, ಕಚ್ಚಾ ನಕ್ಷೆ ತಯಾರಿಸಿರುತ್ತೇನೆ, ಆ ಕಾಲಕ್ಕೆ ಫೋಟೋ ತೆಗೆಸಿರುತ್ತೇನೆ. ನಂತರ ಚಾಸಾ-16 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-11 ರವರನ್ನು ಶವ ತನಿಖಾ

ಕಾಲ, ಮಹಜರ್ ಗಳ ಕಾಲಕ್ಕೆ ತೆಗೆದ ಫೋಟೋ ಮತ್ತು ವಿಡೀಯೋಗಳನ್ನು ನೀಡಿದ ಮೇರೆಗೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ.65(ಬಿ) ರಡಿ ಪ್ರಮಾಣ ಪತ್ರ ಪಡೆದಿರುತ್ತೇನೆ.

ದಿಃ 04.11.2024 ರಂದು ಚಾಸಾ-2, 3 ಮತ್ತು 14 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 05.11.2024 ರಂದು ಬೇಗೂರು ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಮೃತನ ಪಿಎಂ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 14.11.2024 ರಂದು ಕೆಎ-56-ಹೆಚ್-3255 ವಾಹನದ ಐಎಂವಿ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 23.11.2024 ರಂದು ಆರೋಪಿ ಠಾಣೆಗೆ ಹಾಜರಾದ ಮೇರೆಗೆ ದಸ್ತಗಿರಿ ಕ್ರಮ ಜರುಗಿಸಿ ಸೂಕ್ತ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ. ಆರೋಪಿಗೆ ಕಲಂ.133 ಐಎಂವಿ ಆಕ್ಟ್ ರಡಿ ನೋಟೀಸ್ ಜಾರಿ ಮಾಡಿ ಉತ್ತರ ಪಡೆದಿರುತ್ತೇನೆ. ಸದರಿ ವಾಹನಕ್ಕೆ ದಾಖಲೆಗಳನ್ನು ನೀಡಿದ್ದು, ಅದನ್ನು ಪರಿಶೀಲಿಸಿದ್ದು, ಅಪಘಾತವಾದ ಸಮಯಕ್ಕೆ ವಿಮೆ ಚಾಲ್ತಿಯಲ್ಲಿ ಇಲ್ಲದಿರುವುದು ಕಂಡುಬಂದಿರುತ್ತದೆ. ತನಿಖೆ ಮುಕ್ತಾಯವಾದ ಕಾರಣ ಆರೋಪಿ ಮೇಲೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿ ಮತ್ತು ವಾಹನವನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿ ಗೈರು ಹಾಜರಿದ್ದು, ಆತನ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ನುಡಿಯುತ್ತಾರೆ.

ಸಾಕ್ಷಿಯು ಶವತನಿಖಾ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ10 ಎಂದು, ಸಾಕ್ಷಿಯ ಸಹಿಯನ್ನು ನಿಪಿ10(ಎ) ಎಂದು ಗುರ್ತಿಸಲಾಯಿತು. ಸಾಕ್ಷಿಯು ಪಿಎಂ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ11 ಎಂದು, ಸಾಕ್ಷಿಯ ಸಹಿಯನ್ನು ನಿಪಿ11(ಎ) ಎಂದು ಗುರ್ತಿಸಲಾಯಿತು. ಕಲಂ.133 ಐಎಂವಿ ರಡಿ ನೀಡಿರುವ ನೋಟೀಸ್ ನ್ನು ನಿಪಿ12 ಎಂದು, ಸಾಕ್ಷಿಯ ಸಹಿಯನ್ನು ನಿಪಿ12(ಎ) ಎಂದು ಗುರ್ತಿಸಲಾಯಿತು. ಸದರಿ ನೋಟೀಸ್‌ಗೆ ಪಡೆದ ಉತ್ತರವನ್ನು ನಿಪಿ13 ಎಂದು, ಸಾಕ್ಷಿಯ ಸಹಿಯನ್ನು ನಿಪಿ13(ಎ) ಎಂದು ಗುರ್ತಿಸಲಾಯಿತು. ಸಾಕ್ಷಿಯು ನಿಪಿ3 ರಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ3(ಡಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತಯಾರಿಸಿದ ಕಚ್ಚಾ ನಕ್ಷೆಯನ್ನು ನಿಪಿ14 ಎಂದು, ಸಾಕ್ಷಿಯ ಸಹಿಯನ್ನು ನಿಪಿ14(ಎ) ಎಂದು ಗುರ್ತಿಸಲಾಯಿತು. ಸಾಕ್ಷಿಯು ನಿಪಿ3 ರ ಕಾಲಕ್ಕೆ ತೆಗೆದ ನಿಪಿ4 ಮತ್ತು 5 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ6 ರಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ6(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ7 ಮತ್ತು 8 ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಶವತನಿಖಾ ಕಾಲಕ್ಕೆ ತೆಗೆದ ಎರಡು ಫೋಟೋಗಳನ್ನು ನಿಪಿ15 ಮತ್ತು 16 ಎಂದು ಗುರುತಿಸಲಾಯಿತು. ಸಾಕ್ಷಿಯು ಐಎಂವಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ17 ಎಂದು, ಸಾಕ್ಷಿಯ ಸಹಿಯನ್ನು ನಿಪಿ17(ಎ) ಎಂದು ಗುರ್ತಿಸಲಾಯಿತು.

ಸಾಕ್ಷಿಯು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ.65(ಬಿ) ರಡಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ18 ಎಂದು, ಸಾಕ್ಷಿಯ ಸಹಿಯನ್ನು ನಿಪಿ18(ಎ) ಎಂದು ಗುರ್ತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದಃ**

ಸ್ಥಳ ಮಹಜರ್ ಮತ್ತು ಕಚ್ಚಾ-ನಕ್ಷೆಯನ್ನು ಠಾಣೆಯಲ್ಲೆ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೆ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ಐಎಂವಿ ಮತ್ತು ಪಿಎಂ ವರದಿಯನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಾಕಷ್ಟು ಸಾಕ್ಷದಾರಗಳು ಲಭ್ಯವಾಗದಿದ್ದರು, ಆರೋಪಿ ಮೇಲೆ ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ